ಬೆವಿಕಂ
BESCOM
# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು –01

**ಓದಲಾಗಿದೆ:-**

ಬೆವಿಕಂ ನಿರ್ದೇಶಕ ಮಂಡಳಿ ಸಭೆ ಠರಾವು ಸಂಖ್ಯೆ: 85/19–ಎ04/ಟಿಎ ದಿನಾಂಕ: 06.12.2017.

**ಪ್ರಸ್ತಾವನೆ:**

ಚಿತ್ರದುರ್ಗ ವಲಯದ ದಾವಣಗೆರೆ ವೃತ್ತ ವ್ಯಾಪ್ತಿಯಲ್ಲಿನ ಹರಿಹರ ವಿಭಾಗದ ಹೊನ್ನಾಳಿ ಉಪ ವಿಭಾಗದ ವ್ಯಾಪ್ತಿಯಲ್ಲಿನ ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಹಾಗೂ ದೈನಂದಿನ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಹಾಗೂ ಸುಧಾರಣಾ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಜಾರಿಗೊಳಿಸುವ ದೃಷ್ಟಿಯಿಂದ ಹೊನ್ನಾಳಿ ಉಪ ವಿಭಾಗ ವ್ಯಾಪ್ತಿಯಲ್ಲಿ ನೂತನವಾಗಿ ಒಂದು ಉಪ ವಿಭಾಗವನ್ನು ಹಾಗೂ ನೂತನವಾಗಿ ಮೂರು ಕಾರ್ಯ ಮತ್ತು ಪಾಲನಾ ಶಾಖೆಗಳನ್ನು ರಚಿಸಲು ದಿನಾಂಕ: 06.12.2017 ರಂದು ನಡೆದ ಬೆವಿಕಂ ನಿರ್ದೇಶಕ ಮಂಡಳಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಸದರಿ ನಿರ್ಣಯದಂತೆ ಈ ಆದೇಶ ಹೊರಡಿಸಿದೆ.

## -ಆದೇಶ-

**ಸಂಖ್ಯೆ: ಬೆವಿಕಂ/ಬಿಸಿ31/91/2017-18/581** **ದಿನಾಂಕ:** 10 JAN 2018

**ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಾನುಸಾರ, ಕೆಳಕಂಡ ಪ್ರಸ್ತಾವನೆಗಳಿಗೆ ಕಂಪನಿ ಅನುಮೋದನೆ ನೀಡಲಾಗಿದೆ:-**

1. ಚಿತ್ರದುರ್ಗ ವಲಯ ವ್ಯಾಪ್ತಿಯ ಹರಿಹರ ವಿಭಾಗದ ಹೊನ್ನಾಳಿ ಉಪ ವಿಭಾಗವನ್ನು ವಿಭಜಿಸಿ, ಅಧಿಕವಾಗಿ ಒಂದು ಉಪ ವಿಭಾಗವನ್ನು ರಚಿಸಿ, ಸದರಿ ಉಪ ವಿಭಾಗಕ್ಕೆ **"ನ್ಯಾಮತಿ ಉಪ ವಿಭಾಗ"** ಎಂದು ಹೆಸರಿಸಲಾಗಿದೆ.

2. ಚಿತ್ರದುರ್ಗ ವಲಯ ವ್ಯಾಪ್ತಿಯ ಹರಿಹರ ವಿಭಾಗದ ಹೊನ್ನಾಳಿ ಉಪ ವಿಭಾಗದ ವ್ಯಾಪ್ತಿಯಲ್ಲಿ ಅಧಿಕವಾಗಿ ಮೂರು ಕಾರ್ಯ ಮತ್ತು ಪಾಲನಾ ಶಾಖೆಗಳನ್ನು ಈ ಕೆಳಕಂಡಂತೆ ರಚಿಸಲಾಗಿದೆ:-

| ಕ್ರ. ಸಂ | ಅಧಿಕವಾಗಿ ರಚಿಸಿರುವ ಕಾರ್ಯ ಮತ್ತು ಪಾಲನಾ ಶಾಖೆಗಳ ಹೆಸರು | ಆಡಳಿತ ವ್ಯಾಪ್ತಿಗೊಳಪಡುವ ಉಪ ವಿಭಾಗದ ಹೆಸರು |
|---|---|---|
| 1 | ಕಾರ್ಯ ಮತ್ತು ಪಾಲನಾ ಘಟಕ-ಚೀಲೂರು | ನೂತನವಾಗಿ ರಚಿಸಲಾಗಿರುವ ನ್ಯಾಮತಿ ಉಪ ವಿಭಾಗ |
| 2 | ಕಾರ್ಯ ಮತ್ತು ಪಾಲನಾ ಘಟಕ, ಕಟ್ಟಿಗಿ | ನೂತನವಾಗಿ ರಚಿಸಲಾಗಿರುವ ನ್ಯಾಮತಿ ಉಪ ವಿಭಾಗ |
| 3 | ಕಾರ್ಯ ಮತ್ತು ಪಾಲನಾ ಘಟಕ, ಕ್ಯಾಸಿನಕೆರೆ | ಹೊನ್ನಾಳಿ ಉಪ ವಿಭಾಗ |

--2

3. ಅಧಿಕವಾಗಿ ರಚಿಸಲಾಗಿರುವ "ಕಾರ್ಯ ಮತ್ತು ಪಾಲನಾ ಘಟಕ-ಚೀಲೂರು" ಮತ್ತು "ಕಾರ್ಯ ಮತ್ತು ಪಾಲನಾ ಘಟಕ-ಕಟ್ಟಿಗಿ" ಶಾಖೆಗಳನ್ನು ನೂತನವಾಗಿ ರಚಿಸಲಾಗಿರುವ ನ್ಯಾಮತಿ ಉಪ ವಿಭಾಗಕ್ಕೆ ಹಾಗೂ ಅಧಿಕವಾಗಿ ರಚಿಸಲಾಗಿರುವ "ಕಾರ್ಯ ಮತ್ತು ಪಾಲನಾ ಘಟಕ-ಕ್ಯಾಸಿನಕೆರೆ" ಶಾಖೆಯನ್ನು ಹೊನ್ನಾಳಿ ಉಪ ವಿಭಾಗದ ಆಡಳಿತ ನಿಯಂತ್ರಣಕ್ಕೆ ಒಳಪಡಿಸಲಾಗಿದೆ.

4. ನೂತನವಾಗಿ ರಚಿಸಲಾಗಿರುವ ನ್ಯಾಮತಿ ಉಪ ವಿಭಾಗಕ್ಕೆ 8 ಹುದ್ದೆಗಳು ಹಾಗೂ ಮೂರು ಕಾರ್ಯ ಮತ್ತು ಪಾಲನಾ ಘಟಕಗಳಿಗೆ ಕ್ರಮವಾಗಿ ಒಂದೊಂದು ಕಾರ್ಯ ಮತ್ತು ಪಾಲನಾ ಘಟಕಕ್ಕೆ 15 ವಿವಿಧ ದರ್ಜೆಯ ಹುದ್ದೆಗಳಂತೆ ಒಟ್ಟು 53 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ ವಿವರಗಳನ್ನು **ಅನುಬಂಧ 'ಅ'** ನಲ್ಲಿ ನೀಡಲಾಗಿದೆ.

5. ಮಂಜೂರು ಮಾಡಲಾಗಿರುವ 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳ ನೌಕರರನ್ನು ನೂತನ ಉಪ ವಿಭಾಗಕ್ಕೆ ಹಾಗೂ ಕಾರ್ಯ ಮತ್ತು ಪಾಲನಾ ಘಟಕಗಳಿಗೆ ವರ್ಗಾವಣೆ/ಮರುಹಂಚಿಕೆ ಮಾಡಲು ಸಂಬಂಧಪಟ್ಟ ಮುಖ್ಯ ಇಂಜಿನಿಯರ್(ವಿ) ರವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

6. ನೂತನವಾಗಿ ಪ್ರಾರಂಭಿಸಲಾಗುವ ಉಪ ವಿಭಾಗ ಹಾಗೂ ಕಾರ್ಯ ಮತ್ತು ಪಾಲನಾ ಘಟಕಗಳಿಗೆ ಕಛೇರಿಯ ದೈನಂದಿನ ನಿರ್ವಹಣೆಗಾಗಿ ಕಂಪ್ಯೂಟರ್ ಅಗತ್ಯತೆಯನ್ನು ಪರಿಶೀಲಿಸಿ ಒದಗಿಸುವಲ್ಲಿ ಪ್ರಧಾನ ವ್ಯವಸ್ಥಾಪಕರು(ಐಸಿಟಿ ಮತ್ತು ಎಂಐಎಸ್) ಕಂಪನಿ ಕಾರ್ಯಾಲಯ ರವರ ಮೂಲಕ ಸೂಕ್ತ ಕ್ರಮ ತೆಗೆದುಕೊಳ್ಳುವುದು.

7. ಕಂಪನಿಯಲ್ಲಿ ಹಾಲಿ ಚಾಲ್ತಿಯಲ್ಲಿರುವ ನಿಯಮಗಳಾನುಸಾರ ಉಪ ವಿಭಾಗಕ್ಕೆ ಹಾಗೂ ಕಾರ್ಯ ಮತ್ತು ಪಾಲನಾ ಘಟಕಗಳಿಗೆ ವಾಹನ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

8. ಈ ಅದೇಶದಲ್ಲಿ ನೂತನವಾಗಿ ರಚಿಸಲಾಗಿರುವ ಉಪ ವಿಭಾಗ ಹಾಗೂ ಕಾರ್ಯ ಮತ್ತು ಪಾಲನಾ ಘಟಕಗಳನ್ನು ಕಾರ್ಯಾರಂಭಿಸಲು ಸಂಬಂಧಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು 15 ದಿನಗಳೊಳಗಾಗಿ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಈ ಸಂಬಂಧ ಅನುಸರಣಾ ವರದಿಯನ್ನು ಕಂಪನಿ ಕಾರ್ಯಾಲಯಕ್ಕೆ ಸಲ್ಲಿಸುವುದು. ವಿವರಗಳನ್ನು **ಅನುಬಂಧ 'ಆ'** ನಲ್ಲಿ ನೀಡಲಾಗಿದೆ.

9. ನೂತನವಾಗಿ ರಚಿಸಲಾಗಿರುವ ಉಪ ವಿಭಾಗ ಹಾಗೂ ಕಾರ್ಯ ಮತ್ತು ಪಾಲನಾ ಘಟಕದ ಕಛೇರಿಗಳನ್ನು ಪುನರಾರಂಭಿಸಲು ಸೂಕ್ತ ಕಟ್ಟಡ ವ್ಯವಸ್ಥೆಯನ್ನು ಒದಗಿಸಲು ಸಂಬಂಧಿಸಿದ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ) ರವರು ಕ್ರಮ ಕೈಗೊಳ್ಳುವುದು.

10. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಬೆವಿಕಂ, ದಾವಣಗೆರೆ ರವರ ಪ್ರಸ್ತಾವನೆ ಸಂಖ್ಯೆ: ಅಇಂ(ವಿ)/ಉಲೆನಿ/ಸಲೆಅ/ಹಿಸ/2017-18/9787-90 ದಿನಾಂಕ: 01.12.2017 ರ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವಂತೆಯೇ ಹೊಸದಾಗಿ ರಚಿಸಲಾಗಿರುವ ಉಪ ವಿಭಾಗ ಹಾಗೂ ಕಾರ್ಯ ಮತ್ತು ಪಾಲನಾ ಘಟಕಗಳ ಭೌಗೋಳಿಕ ವ್ಯಾಪ್ತಿಗೆ ಒಳಪಡುವ ಪ್ರದೇಶ, ಫೀಡರ್‌ಗಳು, ಪರಿವರ್ತಕಗಳು ಹಾಗೂ ಇತರೆ ವಿವರಗಳನ್ನೊಳಗೊಂಡಂತೆ ಪ್ರತ್ಯೇಕ ಆದೇಶವನ್ನು ಸಂಬಂಧಿಸಿದ ವಲಯದ ಮುಖ್ಯ ಇಂಜಿನಿಯರ್(ವಿ) ರವರು ಹೊರಡಿಸುವುದು.

ಈ ಆದೇಶವು ಕೂಡಲೇ ಜಾರಿಗೆ ಬರುತ್ತದೆ.

**ಆದೇಶದ ಮೇರೆಗೆ,**

**ಪ್ರಧಾನ ವ್ಯವಸ್ಥಾಪಕರು(ಆ. ಮತ್ತು ಮಾ.ಸಂ.),**
**ಅಧಿಕ ಪ್ರಭಾರ**
**ಬೆ.ವಿ.ಕಂ., ಬೆಂಗಳೂರು.**

**ಪ್ರತಿಗಳು:-**

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಬೆವಿಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
4. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ, ಬೆವಿಕಂ.
5. ಅಧೀಕ್ಷಕ ಇಂಜಿನಿಯರ್(ವಿ), ಕಂಪ್ಯೂಟರ್ ಶಾಖೆ, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-9.
6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಬೆವಿಕಂ.
7. ಎಲ್ಲಾ ಅಧಿಕಾರಿಗಳು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
8. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ, ಬೆವಿಕಂ.
9. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಡಳಿತ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಬೆವಿಕಂ.
11. ಎಲ್ಲಾ ಲೆಕ್ಕಾಧಿಕಾರಿ ಕಾರ್ಯ ಮತ್ತು ಪಾಲನೆ/(ಅಂ.ಪ), ವಿಭಾಗ, ಬೆವಿಕಂ.
12. ವ್ಯವಸ್ಥಾಪಕರು, ಸಿಬ್ಬಂದಿ-1 ಮತ್ತು 2 ಸ್ಥಿರಾಸ್ತಿ, ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
13. ಆಪ್ತ ಕಾರ್ಯದರ್ಶಿಗಳು: ನಿರ್ದೇಶಕರು(ಆ ಮತ್ತು ಮಾ.ಸಂ.), ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ., ಕಾವೇರಿ ಭವನ, ಬೆಂಗಳೂರು-9.
14. ಆಪ್ತ ಕಾರ್ಯದರ್ಶಿಗಳು : ವ್ಯ.ನಿ/ನಿ(ತಾಂ.)/ನಿ(ಹ), ಕಂಪನಿ ಕಾರ್ಯದರ್ಶಿ, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
15. ಮುಖ್ಯ ಕಡತ.

**ಪ್ರತಿಗಳು ಮಾಹಿತಿಗಾಗಿ:-**

1. ಅಧ್ಯಕ್ಷರು, ಕ.ವಿ.ಪ್ರ.ನಿ. ನೌಕರರ ಸಂಘ, ಅನಂದರಾವ್ ವೃತ್ತ, ಬೆಂಗಳೂರು.
2. ಅಧ್ಯಕ್ಷರು, ಕೆ.ಇ.ಬಿ. ಇಂಜಿನಿಯರುಗಳ ಸಂಘ, ಅನಂದರಾವ್ ವೃತ್ತ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ. ನೌಕರರ ಸಂಘ/ಕ.ವಿ.ಮಂ ಇಂಜಿನಿಯರುಗಳ ಸಂಘ/ಕ.ವಿ.ಪ್ರ.ನಿ.ನಿ., ಲೆಕ್ಕಾಧಿಕಾರಿಗಳ ಸಂಘ/ಕ.ವಿ.ಪ್ರ.ನಿ.ನಿ., ಪ.ಜಾತಿ ಮತ್ತು ಪ.ಪಂಗಡಗಳ ಕಲ್ಯಾಣ ಸಂಸ್ಥೆ/ಡಿಪ್ಲೊಮೊ ಇಂಜಿನಿಯರುಗಳ ಸಂಘ/ ಕ.ವಿ.ಪ್ರ.ನಿ.ನಿ/ಎಸ್ಕಾಂ ಪ.ಜಾತಿ ಮತ್ತು ಪ.ಪಂಗಡಗಳ ಅಧಿಕಾರಿಗಳ ಸಂಘ, ಬೆಂಗಳೂರು ರವರುಗಳ ಮಾಹಿತಿಗಾಗಿ.

ಅನುಬಂಧ-ಅ

ಆದೇಶ ಸಂಖ್ಯೆ: ಬೆವಿಕಂ/ಬಿಸಿ31/91/2017-18/581 ದಿನಾಂಕ: 10 JAN 2018

## ನೂತನವಾಗಿ ರಚಿಸಲಾಗಿರುವ ಒಂದು ಉಪ ವಿಭಾಗ ಮತ್ತು ಮೂರು ಕಾರ್ಯ ಮತ್ತು ಪಾಲನಾ ಘಟಕಗಳಿಗೆ ಮಂಜೂರಾದ ಹುದ್ದೆಗಳ ವಿವರಗಳು

| ಕ್ರ.ಸಂ | ಹುದ್ದೆಯ ಹೆಸರು | ನ್ಯಾಮತಿ ಉಪ ವಿಭಾಗ | ಚೀಲೂರು ಕಾರ್ಯ ಮತ್ತು ಪಾಲನಾ ಘಟಕ | ಕ್ಯಾಸಿನಕೆರೆ ಕಾರ್ಯ ಮತ್ತು ಪಾಲನಾ ಘಟಕ | ಕಟ್ಟಿಗಿ ಕಾರ್ಯ ಮತ್ತು ಪಾಲನಾ ಘಟಕ | ಒಟ್ಟು |
|---|---|---|---|---|---|---|
| 1 | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) | 1 | | | | 1 |
| 2 | ಸಹಾಯಕ ಇಂಜಿನಿಯರ್(ವಿ) | 1 | 1 | | | 2 |
| 3 | ಸಹಾಯಕ ಇಂಜಿನಿಯರ್(ಕಾಮಗಾರಿ ಮೇಲ್ವಿಚಾರಣಾ ಘಟಕ) | 1 | | | | 1 |
| 4 | ಸಹಾಯಕ ಲೆಕ್ಕಾಧಿಕಾರಿ | 1 | | | | 1 |
| 5 | ಕಿರಿಯ ಇಂಜಿನಿಯರ್(ವಿ) | | | 1 | 1 | 2 |
| 6 | ಮೇಲ್ವಿಚಾರಕ | | 1 | 1 | 1 | 3 |
| 7 | ಮಾಪಕ ಓದುಗ | | 2 | 2 | 2 | 6 |
| 8 | ಯಂತ್ರಕರ್ಮಿ ದರ್ಜೆ-I | | 1 | 1 | 1 | 3 |
| 9 | ಯಂತ್ರಕರ್ಮಿ ದರ್ಜೆ-II | | 2 | 2 | 2 | 6 |
| 10 | ಕಛೇರಿ ಪರಿಚಾರಕ ದರ್ಜೆ-II | 1 | | | | 1 |
| 11 | ಚಾಲಕ ದರ್ಜೆ-II | 1 | | | | 1 |
| 12 | ಮಾರ್ಗದಾಳು | | 4 | 4 | 4 | 12 |
| 13 | ಸಹಾಯಕ ಮಾರ್ಗದಾಳು | | 4 | 4 | 4 | 12 |
| 14 | ಶುಚಿಗಾರರು | 1 | | | | 1 |
| 15 | ಟೈಪಿಸ್ಟ್ | 1 | | | | 1 |
| **ಒಟ್ಟು ಹುದ್ದೆಗಳ ಸಂಖ್ಯೆ** | | **8** | **15** | **15** | **15** | **53** |

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಅಧಿಕ ಪ್ರಭಾರ
ಬೆ.ವಿ.ಕಂ., ಬೆಂಗಳೂರು

ಅನುಬಂಧ-ಆ

ಆದೇಶ ಸಂಖ್ಯೆ: ಬೆವಿಕಂ/ಬಿಸಿ31/91/2017-18/581 ದಿನಾಂಕ: 10 JAN 2018

| ಹೊನ್ನಾಳಿ ಉಪ ವಿಭಾಗವನ್ನು ಪುನರ್ರಚಿಸಿದ ನಂತರ ಹೊನ್ನಾಳಿ ಉಪ ವಿಭಾಗ ಹಾಗೂ ನ್ಯಾಮತಿ ಉಪ ವಿಭಾಗ ವ್ಯಾಪ್ತಿಗೆ ಒಳಪಡುವ ಕಾರ್ಯ ಮತ್ತು ಪಾಲನಾ ಘಟಕಗಳ ವಿವರ | | | |
|---|---|---|---|
| ಕ್ರ.ಸಂ | ಉಪ ವಿಭಾಗದ ಹೆಸರು | ಕಾರ್ಯ ಮತ್ತು ಪಾಲನಾ ಘಟಕದ ಹೆಸರು | ಷರಾ |
| 1 | ಹೊನ್ನಾಳಿ ಉಪ ವಿಭಾಗ | ಹೊನ್ನಾಳಿ ಕಾರ್ಯ ಮತ್ತು ಪಾಲನಾ ಘಟಕ-1 | ಹಾಲಿ ಇರುವುದು |
| | | ಹೊನ್ನಾಳಿ ಕಾರ್ಯ ಮತ್ತು ಪಾಲನಾ ಘಟಕ-2 | ಹಾಲಿ ಇರುವುದು |
| | | ಸಾಸ್ವೆಹಳ್ಳಿ ಶಾಖೆ | ಹಾಲಿ ಇರುವುದು |
| | | ಕುಂದೂರು ಶಾಖೆ | ಹಾಲಿ ಇರುವುದು |
| | | **ಕ್ಯಾಸಿನಕೆರೆ ಶಾಖೆ** | **ಹೊಸದಾಗಿ ರಚಿಸುವುದು** |
| 2 | ನ್ಯಾಮತಿ ಉಪ ವಿಭಾಗ (ಹೊಸದಾಗಿ ರಚಿಸಿರುವುದು) | ನ್ಯಾಮತಿ ಕಾರ್ಯ ಮತ್ತು ಪಾಲನಾ ಘಟಕ-1 | ಹಾಲಿ ಇರುವುದು |
| | | ನ್ಯಾಮತಿ ಕಾರ್ಯ ಮತ್ತು ಪಾಲನಾ ಘಟಕ-2 | ಹಾಲಿ ಇರುವುದು |
| | | ಸವಳಂಗ ಶಾಖೆ | ಹಾಲಿ ಇರುವುದು |
| | | **ಚೀಲೂರು ಶಾಖೆ** | **ಹೊಸದಾಗಿ ರಚಿಸುವುದು** |
| | | **ಕತ್ತಿಗೆ ಶಾಖೆ** | **ಹೊಸದಾಗಿ ರಚಿಸುವುದು** |

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಅಧಿಕ ಪ್ರಭಾರ
ಬೆ.ವಿ.ಕಂ., ಬೆಂಗಳೂರು